ಕರ್ನಾಟಕ ಸರ್ಕಾರ
# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
# Karnataka Residential Educational Institutions Society
(An Organisation of Govt. of Karnataka)

ಕವಶಿಸಸ/ಆಡಳಿತ/ಸಿಬ್ಬಂದಿ/ನೇ.ನೇ-ಸ.ವಿ/ಸಿ.ಆರ್-22/2021-22 ದಿನಾಂಕ:16.11.2021

## ತಿಳುವಳಿಕೆ ಪತ್ರ

ವಿಷಯ : ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಆಯ್ಕೆಯಾದ ಸಮಾಜ ವಿಜ್ಞಾನ ಶಿಕ್ಷಕ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಇತರೆ ದಾಖಲೆಗಳ ಪರಿಶೀಲನೆ ಮಾಡುವ ಬಗ್ಗೆ.

**ಉಲ್ಲೇಖ** : 1: ಅಧಿಸೂಚನೆ ಸಂಖ್ಯೆ: ಆರ್(2)1084/2017-18/ಪಿ.ಎಸ್.ಸಿ, ದಿ: 23.06.2017

2: ಅಂತಿಮ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಪಿಸಿಎಸ್/720/2017-18/1344, ದಿನಾಂಕ:23.09.2021

3. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ ಪಿಸಿಎಸ್/720/2017-18/1391, ದಿನಾಂಕ:30.09.2021.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ವೃಂದದ ಹುದ್ದೆಗಳ ಭರ್ತಿಗಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಹಮ್ಮಿಕೊಂಡಿದ್ದು, ಉಲ್ಲೇಖ(2) ರಲ್ಲಿ ದಿನಾಂಕ 23.09.2021 ರಂದು ಅರ್ಹ ಸಮಾಜ ವಿಜ್ಞಾನ ಶಿಕ್ಷಕ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಉಲ್ಲೇಖ(3)ರ ಕರ್ನಾಟಕ ಲೋಕಸೇವಾ ಆಯೋಗದ ಪತ್ರದಲ್ಲಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವ ಮುನ್ನ ನೇಮಕಾತಿ ಪ್ರಾಧಿಕಾರವು ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ನೇಮಕಾತಿ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ಆಯ್ಕೆಯಾಗಿರುವ ಸಮಾಜ ವಿಜ್ಞಾನ ಶಿಕ್ಷಕ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಸಂಬಂಧಪಟ್ಟ ಇತರೆ ದಾಖಲೆಗಳ ಪರಿಶೀಲನೆ ಕಾರ್ಯವನ್ನು ದಿನಾಂಕ 17.11.2021 ರಂದು ನಿಗಧಿಪಡಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದ ಮುಂದೂಡಲಾಗಿದ್ದು, ಸದರಿ ದಾಖಲೆಗಳ ಪರಿಶೀಲನೆ ಕಾರ್ಯವನ್ನು ದಿನಾಂಕ: **24.11.2021** ರಂದು **ಡಾ॥ ಬಿ.ಆರ್ ಅಂಬೇಡ್ಕರ್ ಭವನದ ತಳ ಮಹಡಿ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು-52** ಇಲ್ಲಿ ಆಯೋಜಿಸಲಾಗಿದೆ. ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲಾ ಮೂಲ ಅಂಕಪಟ್ಟಿಗಳು ಹಾಗೂ ಇತರೆ ಸಂಬಂಧಪಟ್ಟ ದಾಖಲೆ (ಕನ್ನಡ ಮಾಧ್ಯಮ, ಗ್ರಾಮೀಣ, ಹೈ.ಕ. ಯೋ.ನಿರಾಶ್ರಿತ, ಜಾತಿ & ಆದಾಯ ಪ್ರಮಾಣ ಪತ್ರ, ವಿಕಲಚೇತನ ಪ್ರಮಾಣ ಪತ್ರ, ಮಾ.ಸೈ, ಪದವಿಯಲ್ಲಿ ಆಂಗ್ಲ ಮಾದ್ಯಮದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರ) ಗಳನ್ನು ಕಡ್ಡಾಯವಾಗಿ ಮೂಲ ಹಾಗೂ ದೃಢೀಕೃತ ಎರಡು ನಕಲು ಪ್ರತಿಗಳೊಂದಿಗೆ ತಪ್ಪದೇ ಹಾಜರಾಗಬೇಕೆಂದು ಸೂಚಿಸಲಾಗಿದೆ. ನಿಗಧಿತ ಅವಧಿಯಲ್ಲಿ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು, ಯಾವುದೇ ಕಾರಣಕ್ಕೂ ದಾಖಲೆಗಳ ಸಲ್ಲಿಕೆಗೆ ಮತ್ತೊಮ್ಮೆ ಸಮಯಾವಕಾಶ ನೀಡುವುದಿಲ್ಲ.

ಮುಂದುವರೆದು ಒಂದು ವೇಳೆ ದಾಖಲಾತಿ ಪರಿಶೀಲನೆಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಗೈರುಹಾಜರೆಂದು ಪರಿಗಣಿಸಲಾಗುವುದು. ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ನಿಗಧಿಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ನಿಗಧಿತ ಸಮಯದ ನಂತರ ಬಂದಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ ಅಭ್ಯರ್ಥಿಗಳ ಪೋಷಕರು/ಸಂಬಂಧಿಗಳಿಗೆ ಪ್ರವೇಶವಿರುವುದಿಲ್ಲ.

ಕೋವಿಡ್-19 ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಮೊದಲಾದ ಎಲ್ಲಾ SOP ನಿಯಮಗಳನ್ನು ಪಾಲಿಸುವುದರೊಂದಿಗೆ ದಾಖಲಾತಿ ಪರಿಶೀಲನೆಗೆ ಸಹಕರಿಸಲು ತಿಳಿಸಿದೆ.

ದಾಖಲಾತಿ ಪರಿಶೀಲನೆಗೆ ಕೊವಿಡ್-19 ರೋಗ ಗುಣಲಕ್ಷಣವುಳ್ಳ ಅಭ್ಯರ್ಥಿಗಳನ್ನು ನಿಷೇದಿಸಿದೆ. ಅಂತಹ ಅಭ್ಯರ್ಥಿಗಳು ದಿನಾಂಕ: 23.11.2021 ರೊಳಗೆ ಇ-ಮೇಲ್ ಮುಖಾಂತರ **jd.recruitment.kreis@gmail.com** ಗೆ ಸೂಕ್ತ ದಾಖಲೆಗಳೊಂದಿಗೆ ಮನವಿಯನ್ನು ಸಲ್ಲಿಸಿದಲ್ಲಿ, ಅವರಿಗೆ ಮುಂದಿನ ದಿನಗಳಲ್ಲಿ ದಾಖಲಾತಿ ಪರಿಶೀಲನೆಗೆ ಅವಕಾಶ ಕಲ್ಪಿಸಿಕೊಡಲಾಗುವುದು.

| ಕ್ರ ಸ | ದಿನಾಂಕ | ಬೆಳಿಗ್ಗೆ | ಕೆ.ಪಿ.ಎಸ್.ಸಿ ರ‍್ಯಾಂಕ್ ನಂ | ಮದ್ಯಾಹ್ನ | ಕೆ.ಪಿ.ಎಸ್.ಸಿ ರ‍್ಯಾಂಕ್ ನಂ |
|---|---|---|---|---|---|
| 1 | 24.11.2021 | 10.30 ರಿಂದ 2.00 | ರ‍್ಯಾಂಕ್ 1 ರಿಂದ 120 | 2.30 ರಿಂದ 5.30 | ರ‍್ಯಾಂಕ್ 120 ರಿಂದ 150<br>ಹೈ.ಕ ರ‍್ಯಾಂಕ್ 1 ರಿಂದ 77 |

ಕಾರ್ಯನಿರ್ವಾಹಕ ನಿರ್ದೇಶಕರು